

ವಾತಾವರಣವೊಂದನ್ನು ನಿರ್ಮಾಣ ಮಾಡುತ್ತಿದ್ದವು. ಮಳೆಗಾಲದ ರಾತ್ರಿಯಿಡೀ ಅಮ್ಮ ನಿದ್ರೆ ಮಾಡುತ್ತಿರಲಿಲ್ಲ ಎಂದು ತೋರುತ್ತದೆ. ಅಪ್ಪನಿಗೆ ಅಂಥ ಭಯವೇನೂ ಇದ್ದಂತಿರಲಿಲ್ಲ. ಕಾಡಲ್ಲಿ ಗಲಾಟೆ ಹೆಚ್ಚಾದಾಗ ಮೆಲ್ಲನೆ ಎದ್ದು ಚಿಮಿಣಿ ದೀಪ ಉರಿಸಿಕೊಂಡು 'ಕಾಮಿನಿಯ ಕರೆದು ತಾರೆ...' ಅಂತ ಮೆಲ್ಲಗೆ ಹಾಡಿಕೊಂಡು ಬಾಗಿಲು ತೆಗೆದು ಜಗಲಿ ನೋಡಿ, ಮತ್ತೆ ಒಳಬಂದು ಮಲಗಿಕೊಳ್ಳುತ್ತಿದ್ದರು.

ಮಳೆಗಾಲದಲ್ಲಿ ಬೀಳುವ ಈ ಮರಗಳನ್ನು ನೋಡಲು ಮರುದಿನ ಕಾಡಿನೊಳಕ್ಕೆ ಹೋಗುವ ನನ್ನ ಉತ್ಸಾಹವನ್ನು ಯಾರೂ ತಡೆಯುವಂತಿರಲಿಲ್ಲ. ಮೋಡಗಳ ನಡುವಿಂದ ಒಂದೆರಡು ಬೆಳಕಿನ ಕಿರಣಗಳು ಹೊರಬಿದ್ದ ತಕ್ಷಣ ರಾತ್ರಿ ಕೇಳಿದ ಸದ್ದಿನ ಕಡೆಗೆ ಹೊರಟುಬಿಡುತ್ತಿದ್ದೆ. ಇದು ನಮಗೆ ತಿಳಿದಿದ್ದ ಒಂದು ಬಗೆಯ ಶಬ್ದವೇದೀ ವಿದ್ಯೆ. ವ್ಯತ್ಯಾಸವೆಂದರೆ ಇಲ್ಲಿ ಬಾಣದ ಬದಲು ನಾವೇ ಹೋಗಬೇಕು! ನಮ್ಮ ಕಾಡಿನ ಓಟಕ್ಕೆ ತಡೆ ನೀಡುವವರೆಂದರೆ ಮಳೆ ಬೀಳುತ್ತಲೇ ಹುಟ್ಟಿಕೊಳ್ಳುವ ಅಸಂಖ್ಯ ಜಿಗಣೆಗಳು. ಅವುಗಳಿಂದ ತಪ್ಪಿಸಿಕೊಳ್ಳಲು ವೇಗವಾಗಿ ಓಡಬೇಕು, ಇಲ್ಲವೇ ಕ್ಷಣಾರ್ಧದಲ್ಲಿ ಮೈಮೇಲೇರುವ ಅವುಗಳನ್ನು ಮೈಯಿಂದ ಕೆಳಗೆ ಉದುರಿಸಲು ಉಪ್ಪಿನ ಕಟ್ಟೊಂದು ಹಿಡಿದುಕೊಳ್ಳಬೇಕು. ಏನಿದ್ದರೂ ಮಳೆಕಾಡನ್ನು ಜಯಿಸುವುದು ಸುಲಭವಲ್ಲ.

ಮಳೆ ಬಿಟ್ಟು ಬಿಟ್ಟು ಬಂದರೆ, ಕಾಡೊಳಗೆ ಮತ್ತೊಂದು ಲೋಕ ತೆರೆದುಕೊಳ್ಳುತ್ತದೆ. ಮಳೆ ನಿಂತರೂ ಮಳೆಯ ಹನಿಗಳು ನಿಂತಿರುವುದಿಲ್ಲ. ಆದರೂ ನೀಳವಾಗಿ, ಅನಾಥವಾಗಿ, ಎಲ್ಲವನ್ನು ಕಡಿದುಕೊಂಡು ಬಿದ್ದಿರುವ ಬೃಹತ್ ಮರಗಳ ಬಳಿ ಈಗ ನೀವು ಕಾಲು ಜಾರದಂತೆ ಎಚ್ಚರವಹಿಸಿ ಸುತ್ತಾಡಬಹುದು. ಆ ಬಿದ್ದ ಮರಗಳ ಈಚೆ ಬದಿಯಲ್ಲಿ ನಿಂತರೆ ಆಚೆ ಬದಿ ಕಾಣುವುದಿಲ್ಲ. ಆಚೆ ಬದಿ ಸೇರಬೇಕಾದರೆ ಮತ್ತೆ ಮರದ ಸುತ್ತಲೂ ಜಾಗ್ರತೆಯಿಂದ ಸಾಗಬೇಕು. ನಮ್ಮ ಅಜ್ಜ ಒಬ್ಬರು ಹಾಗೆ ಬಿದ್ದ ಮರದ ಕಾಂಡದ ಮೇಲೇರಿ ನಿಂತು ದಿಟ್ಟಿಸುವಾಗ, ಮರದ ಒಂದು ಬದಿಯಲ್ಲಿ ಅಡಗಿ ಕುಳಿತಿದ್ದ ಹಂದಿಯೊಂದು ಅವರ ಮೇಲೆ ಹಾರಿ ಅವರ ಒಂದು ಕೈಯನ್ನೇ ತುಂಡುಮಾಡಿತ್ತು. ಮಣ್ಣಿಂದ ಮೇಲೆದ್ದ ಮರದ ಬೇರುಗಳು ಅಕರಾಳ